**<u>4ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು</u>**

**ಸಿಸಿ ನಂ. 6532/2016 ಚಾಸಾಃ 3 ಪ್ರಾಸಾಃ 3**

| | | |
|---|---|---|
| ಸಾಕ್ಷಿದಾರರ ಹೆಸರು | : | ಬಾಲಾಜಿ |
| ತಂದೆಯ ಹೆಸರು | : | ನಾಗಣ್ಣ |
| ವಯಸ್ಸು | : | 47 ವರ್ಷ |
| ವೃತ್ತಿ | : | ಖಾಸಗಿ ಕೆಲಸ |
| ವಾಸ | : | ಶೇಷಾದ್ರಿಪುರ, ಬೆಂಗಳೂರು |

**<u>ಸಾಕ್ಷಿಯನ್ನು ದಿಃ 05.10.2024 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.</u>**

**<u>ಮುಖ್ಯವಿಚಾರಣೆ: ಪ್ರಾಜ್ಞಾ ಹಿ.ಸಾ.ಸ.ಅ ರವರಿಂದಃ-</u>**

ನಾನು 1999 ರಿಂದ 2023 ರವರೆಗೆ ಬೆಂಗಳೂರಿನ ಶುಶ್ರೂತ ಮೆಡಿಕಲ್ ಆಸ್ಪತ್ರೆಯಲ್ಲಿ ಅಸಿಸ್ಟಂಟ್ ಸೆಕ್ಯೂರಿಟಿ ಆಫೀಸರ್ ಆಗಿ ಕೆಲಸ ಮಾಡಿರುತ್ತೇನೆ. ಚಾಸಾ-1 ರವರು ನಮ್ಮ ಆಸ್ಪತ್ರೆಯಲ್ಲಿ 2013-14ನೇ ಸಾಲಿನಲ್ಲಿ ವೈದ್ಯರು ಮತ್ತು ಆಡಳಿತಾಧಿಕಾರಿಯಾಗಿ ಕರ್ತವ್ಯ ನಿರ್ವಹಣೆ ಮಾಡುತ್ತಿದ್ದರು. ಆರೋಪಿ ವಿಜಯ್ ಕುಮಾರ್ ರವರು ನಮ್ಮ ಆಸ್ಪತ್ರೆಯಲ್ಲಿ ಸಿಸ್ಟಮ್ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದರು.

ಆರೋಪಿಯು ಆಸ್ಪತ್ರೆಗೆ ವಂಚನೆ ಮಾಡಿದ ಬಗ್ಗೆ ಚಾಸಾ-1 ರವರು ದಿಃ10.09.2014 ರಂದು ದೂರು ಸಲ್ಲಿಸಿದ್ದರು, ಅದೇ ದಿನ ಪೊಲೀಸರು ನಮ್ಮ ಆಸ್ಪತ್ರೆಗೆ ಬಂದು ಸ್ಥಳ ಪಂಚನಾಮೆ ಮಾಡಿರುತ್ತಾರೆ. ಸದರಿ ಪಂಚನಾಮೆಯನ್ನು ಮತ್ತು ತನ್ನ ಸಹಿಯನ್ನು ಸಾಕ್ಷಿದಾರರು ನೋಡಿ ಗುರ್ತಿಸಿದ್ದು ಅದನ್ನು ಈಗಾಗಲೇ ನಿಪಿ-2 ಎಂದು ಗುರ್ತಿಸಿದ್ದು, ಅದರಲ್ಲಿರುವ ಸಾಕ್ಷಿದಾರರ ಸಹಿಯನ್ನು ನಿಪಿ-2 ಸಿ ಎಂದು ಗುರ್ತಿಸಲಾಯಿತು. ಆ ಸಮಯದಲ್ಲಿ ನಾನು, ಚಾಸಾ-1 ಮತ್ತು 2 ರವರು ಹಾಜರಿದ್ದು ಸದರಿ ಪಂಚನಾಮೆಗೆ ಸಹಿ ಮಾಡಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ.ವಿ.ಎನ್.ಆರ್. ವಕೀಲರಿಂದಃ**

ಪೊಲೀಸರು ಪಂಚನಾಮೆಗೆ ಸಾಕ್ಷಿಯಾಗಿ ಬರುವಂತೆ ನನಗೆ ಯಾವುದೇ ನೋಟೀಸು ಕೊಟ್ಟಿಲ್ಲ. ಪಂಚನಾಮೆಯ ಸಮಯ ನನಗೆ ಗೊತ್ತಿಲ್ಲ. ಚಾಸಾ-1 ರವರು ನಿಪಿ-2 ಪಂಚನಾಮೆಗೆ ಸಹಿ ಮಾಡಿದ ದಿನಾಂಕಃ25.09.2014 ಎಂದರೆ ನನಗೆ ಗೊತ್ತಿಲ್ಲ. ಪಂಚನಾಮೆಯನ್ನು ಯಾರು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಚಾಸಾ-1 ರವರು ಪಂಚನಾಮೆಗೆ ಆ ದಿನ ಸದರಿ ಸ್ಥಳದಲ್ಲಿ ಹಾಜರಿದ್ದು ಸಹಿ ಮಾಡಿಲ್ಲ ಎಂದರೆ ನನಗೆ ನೆನಪಿರುವುದಿಲ್ಲ. ನಿಪಿ-2 ಪಂಚನಾಮೆಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಸದರಿ ಆಸ್ಪತ್ರೆಯ ಸಿಬ್ಬಂದಿ ಆಗಿರುವುದರಿಂದ ಆಸ್ಪತ್ರೆ ಮೇಲಾಧಿಕಾರಿಗಳ ಸೂಚನೆಯಂತೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**4ನೇ ಎ.ಸಿ.ಜೆ.ಎಂ.ನ್ಯಾ.,**